

## ಚಾನಲ್‌ನಲ್ಲಿ ಕೆಲಸ

ನನ್ನ ಮಗಳ ಪದವಿ ಮುಗಿಯುತ್ತಿದ್ದಂತೆಯೇ ಟೀವಿ ಚಾನಲ್ ಒಂದರಲ್ಲಿ ಕೆಲಸ ಸಿಕ್ಕಿತ್ತು. ಸ್ವಲ್ಪ ಸಮಯದ ನಂತರ ನಾನು ನಮ್ಮೂರಿನ ಹಳ್ಳಿಗೆ ಹೋದಾಗ, ಮನೆ ಕೆಲಸದ ತಿಮ್ಮ ನಮ್ಮ ಕುಟುಂಬದ ಎಲ್ಲರನ್ನೂ ವಿಚಾರಿಸಿಕೊಂಡ. ಹಾಗೆಯೇ ಮಗಳೇನು ಮಾಡ್ತಾ ಇದ್ದಾಳೆ? ಎಂದು ಕೇಳಿದಾಗ ನಾನು ಚಾನಲ್‌ನಲ್ಲಿ ಕೆಲಸ ಮಾಡ್ತಾ ಇದ್ದಾಳೆ ಎಂದಿದ್ದೆ. ಕೂಡಲೇ ಅವನು ಅಷ್ಟೆಲ್ಲಾ ಓದಿಕೊಂಡು ಚಾನಲ್‌ನಲ್ಲಿ ಕೆಲಸಾನಾ? ಅದೂ ಅಲ್ಲದೆ ಹೆಂಗಸರಿಗೆ ಅಲ್ಲೇನು ಕೆಲಸ, ನಿಮ್ಮಂತೋರಿಗೆ ಅದು ಹೇಗೆ ಸರಿ ಬರುತ್ತೆ? ಎಂದೆಲ್ಲಾ ಕೇಳಿದಾಗ ನನಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ.

ನಂತರ ನನಗೆ ತಿಳಿದದ್ದು, ಅವನೊಮ್ಮೆ ನಮ್ಮೂರ ಪೇಟೆಗೆ ಬಂದಿದ್ದಾಗ ಅಲ್ಲಿನ ಕೊಳಕು ನೀರು ಹೋಗುವ ಗಟಾರ(ಚಾನಲ್) ನೋಡಿದ್ದನಂತೆ. ಅದಕ್ಕೇ ಅವನು ಹಾಗೆ ಮುಖ ಸಿಂಡರಿಸಿಕೊಂಡದ್ದು ಎಂದು ತಿಳಿದಾಗ ನಾನು ಟೀವಿ ಚಾನಲ್ ಅನ್ನೋ ಬದಲು ಬರೀ ಚಾನಲ್ ಅಂದಿದ್ದಕ್ಕೆ ನನಗೇ ನಗುಬಂತು.

**ಜಲಜಾ ಬಿ.ಜಿ., ಶಿವಮೊಗ್ಗ**

## ಸ್ವಾತಂತ್ರ್ಯ ದಿನಾಚರಣೆ

ನಾನು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಕ್ಕೆ ಕಾಲೇಜಿಗೆ ಹೊರಟಿದ್ದೆ. ಐದನೇ ಕ್ಲಾಸಿನ ನನ್ನ ಮೊಮ್ಮಗ ಚಿನ್ಮಯ ತಾನೂ ಬರುತ್ತೇನೆಂದು ರಚ್ಚೆಹಿಡಿದ. ನಾನು ಅವನನ್ನು ಕರೆದುಕೊಂಡು ಕಾಲೇಜಿಗೆ ಹೋದೆ. ಪ್ರಿನ್ಸಿಪಾಲ್‌ರು ಧ್ವಜಾರೋಹಣ ಮಾಡಿ, ಭಾಷಣ ಪ್ರಾರಂಭಿಸಿದರು. ಹಿಂದಿನ ವರ್ಷದ ಭಾಷಣದ ಸುರುಳಿ ಬಿಚ್ಚಿ, ಅರ್ಧ ತಾಸು ಸಭಿಕರ ಕಿವಿ ಕೊರೆದರು. ಬಳಿಕ ನೆರೆದ ಸಭಿಕರಿಗೆ ಚಾಕಲೇಟ್ ವಿತರಣೆ ಮಾಡಿದರು.



'ತಾತಾ ಬಂದೊರಿಗೆಲ್ಲಾ ಯಾಕೆ ಚಾಕಲೇಟ್ ಹಂಚಿದ್ರು ಗೊತ್ತಾ?' ಆಹ್ವಾನಿಸದ ಅತಿಥಿಯಂತೆ ಬಂತು ನನ್ನ ಪಾಲಿಗೆ ಚಿನ್ಮಯನ ಪ್ರಶ್ನೆ.

'ನಂಗೆ ಅಪೂಟ ಗೊತ್ತಿಲ್ಲಪ್ಪಾ' ನುಣುಚಿಕೊಳ್ಳುವ ಹೇಳಿಕೆ ನೀಡಿದೆ.

'ಹಾಗಾದ್ರೆ ನಾನೇ ಹೇಳ್ತೀನಿ ಬಿಡು. ಯಾಕಪ್ಪಾ ಅಂದ್ರ ಸಿಹಿ ಹಂಚದಿದ್ರ ಜನ ಬರಾಕಿಲ್ಲ ಅನ್ನೋ ಭಯ' ಎಂದ.

**ಡಾ. ರುದ್ರಯ್ಯ ವಿ., ಗದಗ**